**ದಿನಾಂಕಃ24.09.2025 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಜಿ ಸಿ ಎಮ್ ವಕೀಲರಿಂದಃ–**

1. ಹನುಮಕ್ಕ ಮತ್ತು ಚೆನ್ನಬಸಮ್ಮ ಸಂಬಂಧಿಕರು ಅಲ್ಲ. ಪ್ರತಿವಾದಿ 4 ಮತ್ತು 5 ನನಗೆ ಅಧಿಕಾರ ಪತ್ರ ನೀಡಿರುವುದಿಲ್ಲ. ನಾನು ಸದರಿ 4 ಮತ್ತು 5 ನೇ ಪ್ರತಿವಾದಿಗಳ ಪರ ಸಾಕ್ಷ ನುಡಿಯುತ್ತಿದ್ದೇನೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿದ್ದೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ 4 ಮತ್ತು 5 ನೇ ಪ್ರತಿವಾದಿಗಳಿಂದ ಅಧಿಕಾರ ಪತ್ರವನ್ನು ಪಡೆದಿರುತ್ತೇನೆ ಎಂದು ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು 4 ಮತ್ತು 5 ನೇ ಪ್ರತಿವಾದಿಗಳ ಜೊತೆಯಲ್ಲಿ ಪ್ರತಿವಾದ ಪತ್ರ ಹಾಕಿದ್ದೇನೊ ಇಲ್ಲವೊ ಎಂದು ನನಗೆ ನೆನಪಿಲ್ಲ. ಪ್ರತಿವಾದಿ 4 ರಿಂದ 6 ರವರಿಗೆ ದಾವಾ ಬಿ ಮತ್ತು ಸಿ ಷೆಡ್ಯೂಲ್ ಸ್ವತ್ತುಗಳು ಯಾವ ದಿನಾಂಕದಂದು ಮಂಜೂರಾಗಿವೆ ನಿಖರವಾಗಿ ಹೇಳಲು ಆಗುವುದಿಲ್ಲ.

2. ಸದರಿ ಸ್ವತ್ತುಗಳ ಅಳತೆ 45*20 ಇದೆ. ನನ್ನ ಮನೆ ಸದರಿ ಸ್ವತ್ತಿನ ವಿಸ್ತೀರ್ಣಕ್ಕಿಂತ ಜಾಸ್ತಿ ಇದೆ. 6 ನೇ ಪ್ರತಿವಾದಿಯ ಸ್ವತ್ತಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. 6 ನೇ ಪ್ರತಿವಾದಿಗೆ ಯಾವ ಕಾಯಿಲೆ ಇದೆ ಎಂದು ನನಗೆ ಗೊತ್ತಿಲ್ಲ. 4 ರಿಂದ 6 ನೇ ಪ್ರತಿವಾದಿಗಳು ನಿಡಿ–10 ರಿಂದ 14 ನ್ನು ನನಗೆ ನೀಡಿ 4 ತಿಂಗಳು ಆಗಿದೆ. 5 ನೇ ಪ್ರತಿವಾದಿ ಬೆಂಗಳೂರಿನಲ್ಲಿ ವಾಸ ಇದ್ದಾರೆ. 5 ನೇ ಪ್ರತಿವಾದಿಗೆ ಸುಮಾರು 2–3 ವರ್ಷಗಳಿಂದ ಆರೋಗ್ಯ ಸರಿಯಿಲ್ಲ. ನಿಡಿ–10 ರಿಂದ 14 ರಲ್ಲಿ ನಮೂದಿಸಿರುವ ಸ್ವತ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮೂರು ಆಸ್ತಿಗಳು ನನ್ನ ತಾಯಿಗೆ ಮಂಜೂರು ಆಗಿರುವುದಿಲ್ಲ.

3. ನಿಡಿ–10 ರಿಂದ 14 ದಾಖಲೆಗಳು ನಿಜವಾದ ದಾಖಲೆಗಳು ಆಗಿರುತ್ತವೆ. ನಿಡಿ–10 ಮೂಲ ದಾಖಲೆ ಎಂದು ತಿಳಿದುಕೊಂಡು ನಾನು ಹಾಜರುಪಡಿಸಿರುತ್ತೇನೆ. ನಿಡಿ–4 ಮತ್ತು ನಿಡಿ–10 ರ ನಡುವೆ ವ್ಯತ್ಯಾಸ ಇದೆ. 6 ನೇ ಪ್ರತಿವಾದಿಗೆ ಯಾವಾಗ ಸ್ವತ್ತು ಮಂಜೂರಾಗಿರುತ್ತದೆ ಎಂದು ನನಗೆ

ಗೊತ್ತಿಲ್ಲ. 5 ನೇ ಪ್ರತಿವಾದಿ ಅವರ ಮನೆಯನ್ನು ಪೂರ್ವ ಪಶ್ಚಿಮ 45 ಅಡಿ ಮತ್ತು ಉತ್ತರ –ದಕ್ಷಿಣ 19 ಅಡಿ ವಿಸ್ತೀರ್ಣದಲ್ಲಿ ಕಟ್ಟಿರುತ್ತಾರೆ. ನಾನು ಸಲ್ಲಿಸಿರುವ ನಿಡಿ–11 ರ ಪ್ರಕಾರ ವಿಸ್ತೀರ್ಣ ಜಾಸ್ತಿ ಇದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. 5 ನೇ ಪ್ರತಿವಾದಿ ತನಗೆ ಮಂಜೂರಾದ ಪೂರಾ ವಿಸ್ತೀರ್ಣದಲ್ಲಿ ಮನೆ ಕಟ್ಟಿರುತ್ತಾರೆ. ನಿಡಿ–10 ರಿಂದ 14 ರ ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,. ಹಿರಿಯೂರು.